<u>**ದಿನಾಂಕಃ 08.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>ಪಾಟೀ ಸವಾಲುಃ **ವಾದಿ ಪರ** ಶ್ರೀ ಎನ್ ಜಿ ಜೆ ಕೆ **ವಕೀಲರಿಂದಃ**</u>

ನಾನು ಸಲ್ಲಿಸಿರುವ ಸಾಕ್ಷ್ಯ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ವಾದಿಯವರು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನಿವೇಶನ ಸಂಖ್ಯೆ 26 ನ್ನು ಬೈರಾಪುರ ಗ್ರಾಮ ಪಂಚಾಯತಿಯವರು ದಿನಾಂಕ 21.11.1980 ರಂದು ವಾದಿಯವರಿಗೆ ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ-1 ರ ಹಕ್ಕು ಪತ್ರದಲ್ಲಿ ಸಿದ್ದಯ್ಯರವರಿಗೆ ನಿವೇಶನ ಸಂಖ್ಯೆ 26 ನ್ನು ಬೈರಾಪುರ ಗ್ರಾಮ ಪಂಚಾಯತಿಯವರು ಮಂಜೂರು ಮಾಡಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ಇರಬಹುದು. ದಿನಾಂಕ 21.11.1980 ರಿಂದ ಇಲ್ಲಿಯವರೆಗೂ ವಾದಿಯವರು ನಿವೇಶನ ಸಂಖ್ಯೆ 26 ಕ್ಕೆ ಬೈರಾಪುರ ಗ್ರಾಮ ಪಂಚಾಯತಿಯಲ್ಲಿ ಕಂದಾಯ ಪಾವತಿ ಮಾಡುತ್ತಾ ಸ್ವಾಧೀನತೆ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿಯವರು ನಿವೇಶನ ಸಂಖ್ಯೆ 26 ಕ್ಕೆ ಕಂದಾಯ ಪಾವತಿ ಮಾಡುತ್ತಾ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ವೆಂಕಟಾಚಲ ಎಂಬುವವರು ಸಿದ್ದಯ್ಯರವರ ವಿರುದ್ಧ ರಸ್ತೆಗೆ ಸಂಬಂಧಿಸಿದಂತೆ ಅಸಲು ದಾವಾ ಸಂಖ್ಯೆ 17/1992 ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಅಸಲು ದಾವಾ ಸಂಖ್ಯೆ 17/1992 ರ ತೀರ್ಪಿನ ವಿರುದ್ಧ ಆರ್.ಎ ಸಂಖ್ಯೆ 127/2001 ನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆರ್.ಎ ಸಂಖ್ಯೆ 127/2001 ರಲ್ಲಿ ಸಿದ್ದಯ್ಯ ಮತ್ತು ವೆಂಕಟಾಚಲರವರು ರಾಜಿ ಮಾಡಿಕೊಂಡಿದ್ದರು ಎಂದರೆ ಸಾಕ್ಷಿದಾರರು ಸುಳ್ಳಿನಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆರ್ ಎ ಸಂಖ್ಯೆ 127/2001 ರಲ್ಲಿ ಸಿದ್ದಯ್ಯರವರು ರಸ್ತೆಗಾಗಿ 11 X 40 ಅಡಿ ಜಾಗವನ್ನು ರಾಜಿಯಲ್ಲಿ ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಆರ್.ಎ ಸಂಖ್ಯೆ 127/2001 ರಲ್ಲಿ ಸಿದ್ದಯ್ಯರವರು 11 ಅಡಿ ಜಾಗವನ್ನು ರಸ್ತೆಗಾಗಿ ಬಿಟ್ಟು ಉಳಿದ 19 X 40 ಅಡಿ ಜಾಗದಲ್ಲಿ ಸ್ವಾಧೀನತೆ ಹೊಂದಿದ್ದಾರೆ ಎಂದರೆ ಸರಿಯಲ್ಲ.

ನಾನು 1 ನೇ ಪ್ರತಿವಾದಿಯಿಂದ ಖರೀದಿಸಿದ್ದೇನೆ ಎಂದು ಹೇಳಲಾದ ನಿವೇಶನ ಸಂಖ್ಯೆ 23 ರ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

<u>ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ